ಸ್ಥಾಪನೆ 1964

# ಕೃಷಿಮೇಳ 2021
ರೈತರ ಹಬ್ಬ

ಕೃಷಿಮೇಳ ಬುಲೆಟಿನ್ ★ 13ನೇ ನವೆಂಬರ್ 2021

ಕೃಷಿಮೇಳ–2021
ನವೆಂಬರ್ 11–14

## ಜಿಲ್ಲಾ ಮಟ್ಟದ ಪ್ರಗತಿಪರ ರೈತರಿಗೆ ಹಾಗೂ ಲೇಖಕರಿಗೆ ಸನ್ಮಾನ


ಸಾಧಕರಿಗೆ ಗಣ್ಯರಿಂದ ಪ್ರಶಸ್ತಿ ಪ್ರದಾನ

ವೈಭವದಿಂದ ಮೂರನೇಯ ದಿನವೂ ಅರ್ಥಪೂರ್ಣ ಜನಸಾಗರದಿಂದ ಕೂಡಿದ ಕೃಷಿಮೇಳದಲ್ಲಿ ಹಾಸನ, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳ ಅತ್ಯುತ್ತಮ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗಳನ್ನು ಮತ್ತು ಅತ್ಯುತ್ತಮ ಲೇಖನಗಳಿಗೆ ಡಾ. ಆರ್. ದ್ವಾರಕೀನಾಥ್ ಮತ್ತು ಪ್ರೊ. ಬಿ.ವಿ. ವೆಂಕಟರಾವ್ ಪ್ರಶಸ್ತಿಗಳನ್ನು ವಿಜೇತರಿಗೆ ನೀಡಿ ಗೌರವಿಸಲಾಯಿತು. ಅತಿಥಿಗಳಾಗಿ ಭಾಗವಹಿಸಿದ ಐ.ಸಿ.ಎ.ಆರ್–ಕೃಷಿ ತಂತ್ರಜ್ಞಾನ ಅಳವಡಿಕೆ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ವಿ. ವೆಂಕಟಸುಬ್ರಮಣಿಯನ್ ಅವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ಹವಾಮಾನ ಬದಲಾವಣೆ ಏರುಪೇರಾಗಿದ್ದು, ಇದರಿಂದ ಹೊರಬರಲು ನಾಲ್ಕು ಸೂತ್ರಗಳಾದ ಮಳೆ, ಆರ್ಥಿಕ ವ್ಯವಸ್ಥೆ, ಮಾರುಕಟ್ಟೆ ಹಾಗೂ ಜಾಗತೀಕರಣವು ಬಹು ಮುಖ್ಯ ವಾಗುತ್ತದೆಂದರು. ಪ್ರಧಾನ ಮಂತ್ರಿಗಳ ಮಿಷನ್ ಪ್ರಕಾರ, ರೈತರ ಆದಾಯವನ್ನು ದ್ವಿಗುಣಗೊಳಿಸಲು ನಾವು ತಂತ್ರಜ್ಞಾನದ ವ್ಯವಸ್ಥೆ ಮತ್ತು ಪರಿಕರಗಳ ಪೂರೈಕೆಗಳ ಜೊತೆಗೆ ನೀತಿ ಬೆಂಬಲವನ್ನು ಪರಿಶೀಲಿಸಬೇಕಾಗಿದೆ ಎಂದು ಅವರು ಹೇಳಿದರು. ಉತ್ಪಾದನೆಯಲ್ಲಿ ನಾವು ಮುಂದಿದ್ದು, ಗುಣಮಟ್ಟದ ಉತ್ಪನ್ನಕ್ಕೆ ಒತ್ತು ಕೊಡಬೇಕಾಗಿದೆ ಎಂದರು. ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರಾದ ಡಾ. ಸೋಮಶೇಖರ್ ಅಥಣಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ರೈತರು ಮೇಳದಲ್ಲಿ ನೋಡಿದ ನೂತನ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ಸುತ್ತಮುತ್ತಿನ ರೈತರಿಗೆ ತಲುಪಿಸಿ ಎಂದರು. ಅತಿಥಿಗಳಾಗಿ ಭಾಗವಹಿಸಿದ ಐ.ಸಿ.ಎ.ಆರ್–ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಬಿ.ಎನ್. ಶ್ರೀನಿವಾಸಮೂರ್ತಿ ಮಾತನಾಡಿ ಕೃಷಿಮೇಳ ಒಂದು ಹಬ್ಬ, ರೈತರೆಲ್ಲರೂ ಬರಲು ಆಗುವುದಿಲ್ಲ ಆದ್ದರಿಂದ ಆನ್‌ಲೈನ್‌ನಲ್ಲಿ ಮೇಳವನ್ನು ಆಯೋಜಿಸಿರುವುದು ಶ್ಲಾಘನೀಯ ಎಂದರು. ದೇಶದಲ್ಲಿ ತೋಟಗಾರಿಕಾ ಕ್ರಾಂತಿ ನಡೆಯುತ್ತಿದ್ದು, ಶೇ.8ರಷ್ಟು ಉತ್ಪಾದನೆ ಹೆಚ್ಚಾಗುತ್ತಿದೆ ಆದರೂ ರೈತರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ನೀತಿಗಳನ್ನು ರೂಪಿಸಲಾಗುತ್ತಿದೆ ಎಂದು ಹೇಳಿ ರೈತರು ಸಂಘಟಿತರಾಗಬೇಕೆಂದರು. ಈ ನಿಟ್ಟಿನಲ್ಲಿ ಒಂದು ಜಿಲ್ಲೆ ಒಂದು ಉತ್ಪನ್ನದ ಕಾರ್ಯಕ್ರಮವು ಮಹತ್ವದಾಗಿರುತ್ತದೆ ಎಂದರು. ರೈತರು ಬೆಳೆಯುವುದಲ್ಲದೆ ಮಾರಾಟಗಾರರೂ ಆಗಬೇಕೆಂದರು. ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು 350 ತಳಿಗಳನ್ನು ಹಾಗೂ 150 ತಂತ್ರಜ್ಞಾನಗಳನ್ನು ರೈತರ ಬಾಗಿಲಿಗೆ ತಲುಪಿಸಲು ವ್ಯವಸ್ಥೆ ಮಾಡಲಾಗಿದೆ ಎಂದರು.

ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರಾದ ಡಾ. ಮಹೇಶ್ವರಪ್ಪ ಭಾಗವಹಿಸಿ ಈಗಿನ ಹವಾಮಾನ ವೈಪರೀತ್ಯದ ಹಾಗೂ ಜನಸಂಖ್ಯೆ ಹೆಚ್ಚಳದ ಸನ್ನಿವೇಶದಲ್ಲಿ ಆಧುನಿಕತೆಗೋಸ್ಕರ ನಾವು ಭೂತಾಯಿಯ ರಕ್ಷಣೆಯನ್ನು ಮರೆತಿದ್ದೇವೆ ಇದಕ್ಕೆ ಸಾಂಕ್ರಾಮಿಕ ಕರೋನವೇ ಕಾರಣ ಎಂದರು. ಈ ಪರಿಸ್ಥಿತಿಯಲ್ಲಿ ಸಮಗ್ರ ಕೃಷಿ ಪದ್ಧತಿ ಅಳವಡಿಕೆಯೊಂದೇ ಮಾರ್ಗ ಹಾಗೆಯೇ ರೈತರು ಮಣ್ಣಿನ ಫಲವತ್ತತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸಾಗಬೇಕೆಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್‌ರವರು ವಹಿಸಿದ್ದರು. ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರಾದ ಡಾ. ಎನ್. ದೇವಕುಮಾರ್‌ರವರು ಪ್ರಶಸ್ತಿ ವಿಜೇತರಿಗೆ ಅಭಿನಂದನೆಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರಾದ ಡಾ. ವೈ.ಜಿ. ಷಡಾಕ್ಷರಿ, ಡಾ. ಶ್ರೀನಿವಾಸ್, ಡೀನ್ (ಸ್ನಾತಕೋತ್ತರ) ಮತ್ತು ಡಾ. ಎಸ್. ವಿ. ಸುರೇಶ್, ಡೀನ್ (ವಿದ್ಯಾರ್ಥಿ ಕಲ್ಯಾಣ) ಇವರುಗಳು ಭಾಗವಹಿಸಿದ್ದರು.

### ಕೃಷಿಮೇಳದಲ್ಲಿ ಗಮನ ಸೆಳೆಯುತ್ತಿರುವ ಮಳಿಗೆಗಳು

- ಮೇಳದ ಘೋಷವಾಕ್ಯದಂತೆ ರೈತರ ಆದಾಯ ದ್ವಿಗುಣ ಗೊಳಿಸಲು ವಿಶ್ವವಿದ್ಯಾನಿಲಯದ ಕೃಷಿ ವಿಜ್ಞಾನ ಕೇಂದ್ರಗಳಿಂದ ತೆರೆದಿರುವ ದೊಡ್ಡ ಮಳಿಗೆಯಲ್ಲಿ ರೈತರಿಗೆ ಹಲವಾರು ಮಾಹಿತಿಯನ್ನು ನೀಡುತ್ತಿದ್ದು ಗಮನ ಸೆಳೆದಿದೆ
- ಹೊಸ ತಳಿಗಳ ಪ್ರಾತ್ಯಕ್ಷಿಕೆ, ನವೀನ ಯಂತ್ರೋಪಕರಣಗಳು, ಔಷಧಿ ಸಿಂಪಡಿಸುವ ಡ್ರೋಣ್, ನರ್ಸರಿ, ಚುಚ್ಚದ ಜೇನು, ದ್ರವ ರೂಪದ ನ್ಯಾನೊ ರಸ ಗೊಬ್ಬರ, ಖಾಸಗಿ ಮತ್ತು ಸರಕಾರದ ಮಳಿಗೆಗಳು, ದುಬಾರಿ ಬೆಲೆಯ ಜಾನುವಾರುಗಳು ರೈತರನ್ನು ಗಮನ ಸೆಳೆದವು.
- ಬಿಸಿ ಬಿಸಿ ಮುದ್ದೆ, ಕಾಳಿನ ಸಾರಿನ ಜೊತೆಗೆ ಮೊಟ್ಟೆಯ ಊಟವನ್ನು ಸಾವಿರಾರು ಜನರು ಸವಿದರು.


ಕುಲಪತಿಗಳು ಭೋಜನದ ವ್ಯವಸ್ಥೆಯನ್ನು ಪರಿಶೀಲಿಸುತ್ತಿರುವುದು

### ಕೃಷಿಮೇಳದ ವೀಕ್ಷಣೆ

ಮಳೆಗೂ ಕುಂದದೆ ಆಸಕ್ತಿ ವಹಿಸಿ ಮೊದಲೆರಡು ದಿನ ಭೌತಿಕವಾಗಿ 2.3 ಲಕ್ಷಕ್ಕಿಂತ ಹೆಚ್ಚು ಹಾಗೂ ಆನ್‌ಲೈನ್‌ನಲ್ಲಿ 6.7 ಲಕ್ಷ ಜನರು ಮೇಳವನ್ನು ವೀಕ್ಷಿಸಿರುತ್ತಾರೆ.

ಮೂರನೆಯ ದಿನ ಭೌತಿಕವಾಗಿ 3 ಲಕ್ಷಕ್ಕಿಂತ ಹೆಚ್ಚು ಹಾಗೂ ಆನ್‌ಲೈನ್‌ನಲ್ಲಿ 12.96 ಲಕ್ಷ ಜನರು ವೀಕ್ಷಿಸಿದ್ದಾರೆ.

## ಹಾಸನ, ಮಂಡ್ಯ ಹಾಗೂ ಕೋಲಾರ ಜಿಲ್ಲೆಗಳ ಪ್ರಗತಿಪರ ರೈತರಿಗೆ ಮತ್ತು ಅತ್ಯುತ್ತಮ ಲೇಖನಗಳಿಗೆ ಪ್ರಶಸ್ತಿ

- **ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ಯಶೋಗಾಥೆಯ ಲೇಖನಕ್ಕೆ ಪ್ರಶಸ್ತಿ :** ಡಾ. ವಿ.ಎಲ್. ಮಧುಪ್ರಸಾದ್, ಡಾ. ಎಸ್. ಚಂದ್ರಶೇಕರ್, ಡಾ. ಉಷಾ ರವೀಂದ್ರ ಮತ್ತು ಶ್ರೀ ಮುನಿಬೈರಪ್ಪ ಇವರುಗಳಿಗೆ **'ನಗರ ಪ್ರದೇಶಗಳಿಗೆ ವಲಸೆಯನ್ನು ತಡೆದ ಸಮಗ್ರ ಕೃಷಿ ಪದ್ಧತಿಯ ಯಶೋಗಾಥೆ'** ಎಂಬ ಲೇಖನಕ್ಕೆ ಪ್ರಶಸ್ತಿ ನೀಡಲಾಗಿದೆ.
- **ಪ್ರೋ. ಬಿ.ವಿ. ವೆಂಕಟರಾವ್ ಅತ್ಯುತ್ತಮ ವೈಜ್ಞಾನಿಕ ಲೇಖನಕ್ಕೆ ಪ್ರಶಸ್ತಿ :** ಡಾ. ಎ. ಸತೀಶ್ ಮತ್ತು ಡಾ. ಎಂ. ಹರ್ಷ ಇವರುಗಳಿಗೆ **'ಕೃಷಿಯಲ್ಲಿ ಸಕ್ಕರೆ ಕಾರ್ಖಾನೆಯ ತ್ಯಾಜ್ಯಗಳ ಬಳಕೆ'** ಎಂಬ ಲೇಖನಕ್ಕೆ ಪ್ರಶಸ್ತಿ ನೀಡಲಾಗಿದೆ.
- ಹಾಸನ ಜಿಲ್ಲೆಯ **ಶ್ರೀ ಯು.ಎಂ. ನಾಗವರ್ಮ,** ಉಣ್ಣೇನಹಳ್ಳಿ, ಹೊಳೆನರಸೀಪುರ ತಾಲ್ಲೂಕು ಮತ್ತು **ಶ್ರೀಮತಿ ಎನ್.ಆರ್. ದಿವ್ಯ,** ಕತ್ತರಿಘಟ್ಟ, ಚನ್ನರಾಯಪಟ್ಟಣ ತಾಲ್ಲೂಕು ಇವರುಗಳಿಗೆ ಕ್ರಮವಾಗಿ **ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆಯ ಪ್ರಶಸ್ತಿ**ಯನ್ನು ನೀಡಿ ಗೌರವಿಸಲಾಗಿದೆ.
- ಮಂಡ್ಯ ಜಿಲ್ಲೆಯ **ಶ್ರೀ ಜೆ.ಸಿ. ಶಿವರಾಮ್,** ಗಾಣದಾಳು, ದುದ್ದ ಹೋಬಳಿ, ಮಂಡ್ಯ ತಾಲ್ಲೂಕು ಮತ್ತು **ಶ್ರೀಮತಿ ಚಿಕ್ಕಮಹದೇವಮ್ಮ,** ಮುತ್ತೇಗೆರೆ, ಬಸರಾಳು ಹೋಬಳಿ, ಮಂಡ್ಯ ತಾಲ್ಲೂಕು ಇವರುಗಳಿಗೆ ಕ್ರಮವಾಗಿ **ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆಯ ಪ್ರಶಸ್ತಿ**ಯನ್ನು ನೀಡಿ ಗೌರವಿಸಲಾಗಿದೆ.
- ಕೋಲಾರ ಜಿಲ್ಲೆಯ **ಶ್ರೀ ಟಿ. ಚನ್ನಪ್ಪ,** ಮತ್ತಿಕುಂಟೆ ಗ್ರಾಮ, ಕೋಲಾರ ತಾಲ್ಲೂಕು ಮತ್ತು **ಶ್ರೀಮತಿ ಎಂ. ಸರೋಜಮ್ಮ,** ಗುರಗಂಜಿಗುರ್ಕಿ, ವಕ್ಕಲೇರಿ ಹೋಬಳಿ, ಕೋಲಾರ ತಾಲ್ಲೂಕು ಇವರುಗಳಿಗೆ ಕ್ರಮವಾಗಿ **ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆಯ ಪ್ರಶಸ್ತಿ**ಯನ್ನು ನೀಡಿ ಗೌರವಿಸಲಾಗಿದೆ.
- ಹಾಸನ, ಮಂಡ್ಯ ಮತ್ತು ಕೋಲಾರ ಜಿಲ್ಲೆಯ ತಾಲ್ಲೂಕು ಮಟ್ಟದ ಪ್ರಗತಿಪರ ಯುವ ರೈತ ಮತ್ತು ರೈತ ಮಹಿಳೆಯರನ್ನೂ ಸಹ ಪುರಸ್ಕರಿಸಲಾಗಿದೆ.




ಬಿಂಬಗ್ರಾಹಿಯಲ್ಲಿ ಕಂಡಂತೆ ಮೇಳ




ಯುವ ರೈತ & ರೈತ ಮಹಿಳೆಯರಿಗೆ ಸನ್ಮಾನ









ಬಿಂಬಗ್ರಾಹಿಯಲ್ಲಿ ಕಂಡಂತೆ ಮೇಳ





The Bhyrachandra variety of jackfruit. (R) A new variety of sugarcane on display at Krishi Mela. This variety is best suited for the extraction of jaggery.

Scientists introduce new variety of red-petaled jackfruit



ಮಳೆಗೂ ಕುಂದದ ಕೃಷಿ ಮೇಳದ ಸಂಭ್ರಮ

ಕೃಷಿಮೇಳದ ಸಿರಿಯನ್ನು ವರ್ಣಿಸಿದ ದಿನ ಪತ್ರಿಕೆಗಳು



ಕೃಷಿಮೇಳದಲ್ಲಿ ಗಮನಸೆಳೆಯುತ್ತಿದೆ ಕೆವಿಕೆ ಮಳಿಗೆ | ತೋಟಗಾರಿಕೆ, ಅರಣ್ಯೀಕರಣ ಇನ್ನಿತರ ಮಾಹಿತಿ

ರೈತರ ಆದಾಯ ದ್ವಿಗುಣಗೊಳಿಸಲು ಆದ್ಯತೆ